**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.145/2023**

ದಿನಾಂಕ 20.08.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 9 ಪ್ರಾಸಾ - 7

| | | |
|---|---|---|
| ಹೆಸರು | ಃ | ಡಾ.ಯಶವಂತ್ |
| ತಂದೆಯ ಹೆಸರು | ಃ | ಡಾ.ಹುಚ್ಚಯ್ಯ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ಹಿರಿಯ ತಜ್ಞರು, ಜನರಲ್ ಆಸ್ಪತ್ರೆ, ಮಾಗಡಿ |
| ವಾಸಸ್ಥಳ | ಃ | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2019 ರಿಂದ ಇಲ್ಲಿಯವರೆಗೆ ನಾನು ಮಾಗಡಿ ಜನರಲ್ ಆಸ್ಪತ್ರೆಯಲ್ಲಿ ಹಿರಿಯ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 30.07.2023 ರಂದು ರಾತ್ರಿ 8 ರ ಸಮಯದಲ್ಲಿ 24 ವರ್ಷದ ಮಹಿಳೆ ಮಮತ ಹೆಚ್.ಎಸ್. ಬಿನ್ ಸಿದ್ದಪ್ಪ, ಹೊನ್ನಾಪುರ ಗ್ರಾಮದ ನಿವಾಸಿ ಪಂಚಾಕ್ಷರಿ ಎಂಬ ವ್ಯಕ್ತಿಯಿಂದ ಕೈಯಿಂದ ಹಲ್ಲೆಗೆ ಒಳಗಾಗಿದ್ದಾಳೆ ಎಂಬ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದಳು.

3. ಅದೇ ದಿನ ಆಕೆಯನ್ನು ಪರೀಕ್ಷೆ ಮಾಡಿ ನೋಡಲಾಗಿ ಆಕೆಯ ಮೈಮೇಲೆ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

(1) ಎಡ ಹಣೆಯ ಮೇಲೆ ಊತವಿತ್ತು.

(2) 0.5 X 1 cm ಅಳತೆಯ ತರಚಿದ ಗಾಯ ಎದೆಯ ಮಧ್ಯಭಾಗದಲ್ಲಿ ಇತ್ತು.

(3) Multiple linear abrasion over left forearm

(4) abrasion present over left elbow 0.5x0.5 cm

(5) abrasion present over left arm 0.5 x0.5 cm

(6) abrasion present over left leg 1x1cm

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ 1 ರಿಂದ 6 ಗಾಯಗಳು ಸಮಾನ್ಯ ಸ್ವರೂಪದ್ದಾಗಿದ್ದು, ಗಾಯದ ವಯಸ್ಸು 0 ಯಿಂದ 10 ಗಂಟೆಯ ಒಳಗೆ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರ ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಶಾನೆ ಪಿ 15 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 15(ಎ) ಎಂದು ಗುರುತಿಸಲಾಯಿತು.

4. ದಿನಾಂಕ 30.07.2023 ರಂದು ರಾತ್ರಿ 8.10 ಗಂಟೆ ಸಮಯದಲ್ಲಿ 40 ವರ್ಷದ ಮಹಿಳೆ ಗಂಗಲಕ್ಷ್ಮಮ್ಮ ಕೋಂ.ಸಿದ್ದಪ್ಪ, ಹೊನ್ನಾಪುರ ಗ್ರಾಮದ ನಿವಾಸಿ ಪಂಚಾಕ್ಷರಿ ಎಂಬ ವ್ಯಕ್ತಿಯಿಂದ ಕೈಯಿಂದ ಹಲ್ಲೆಗೆ ಒಳಗಾಗಿದ್ದಾಳೆ ಎಂಬ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದಳು.

5. ಅದೇ ದಿನ ಆಕೆಯನ್ನು ಪರೀಕ್ಷೆ ಮಾಡಿ ನೋಡಲಾಗಿ ಆಕೆಯ ಮೈಮೇಲೆ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

(1) Abrasion present over center of forehead 3 x 0.5 cm.

(2) Abrasion over nose 0.5 x 0.5 cm

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ 1 ಮತ್ತು 2 ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು, ಗಾಯದ ವಯಸ್ಸು 0 ಯಿಂದ 10 ಗಂಟೆಯ ಒಳಗೆ ಆಗಿರುತ್ತದೆ. ಅದಕ್ಕೆ

ಸಂಬಂಧಿಸಿದಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರ ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಶಾನೆ ಪಿ 16 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 16(ಎ) ಎಂದು ಗುರುತಿಸಲಾಯಿತು.

6. ಒಬ್ಬ ವ್ಯಕ್ತಿ ಮೇಲೆ ಹೇಳಿದ ಮಹಿಳೆಯರನ್ನು ಜುಟ್ಟು ಹಿಡಿದು ನೆಲದಲ್ಲಿ ಎಳೆದಾಡಿದಾಗ ನಿಶಾನೆ ಪಿ 15 ಮತ್ತು 16 ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇದೆ.

**<u>ಪಾಟೀ ಸವಾಲುಃ ಶ್ರೀ.ಟಿಜಿ, ವಕೀಲರಿಂದ ಆರೋಪಿಗಳ ಪರವಾಗಿಃ</u>**

7. ಗಾಯದ ವಯಸ್ಸನ್ನು ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಯಾವುದೇ ವ್ಯಕ್ತಿ ನೆಲದ ಮೇಲೆ ಬಿದ್ದು ಹೊರಳಾಡಿದಾಗ ನಿಶಾನೆ ಪಿ 15 ಮತ್ತು 16 ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಗಾಯದ ಪ್ರಮಾಣ ಪತ್ರವನ್ನು ಕೈಬರಣಿಗೆಯಲ್ಲಿ ಬರೆಯಲಾಗುತ್ತದೆ ಎಂದರೆ ಸರಿ. ನಾನು ಯಾವುದೇ ಗಾಯಾಳುವನ್ನು ಪರೀಕ್ಷೆ ಮಾಡದೇ ಇದ್ದರೂ ಸಹ ಪೊಲೀಸರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಮತ ಮತ್ತು ಗಂಗಲಕ್ಷ್ಮಮ್ಮ ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**